ಹಣದಾಸೆಗೆ ಮೌಂಟ್ ಎವರೆಸ್ಟ್‌ಗೂ ಏಣಿ

■ **ಐಎಎನ್‌ಎಸ್** ಕಾಠ್ಮಂಡು

ದುಡ್ಡು ಸಿಗುತ್ತೆ ಅಂದ್ರೆ ಆಕಾಶಕ್ಕೂ ಏಣಿ ಹಾಕುವ ಕಾಲ ಇದು. ಅದರಲ್ಲಿ ಮೌಂಟ್ ಎವರೆಸ್ಟ್ ಏನು ಮಹಾ. ಹಿಂದೊಮ್ಮೆ ಜಗತ್ತಿನ ಸಾಹಸಿಗಳನ್ನು ಕೈ ಬೀಸಿ ಕರೆಯುತ್ತಿದ್ದ ಜಗತ್ತಿನ ಅತಿ ಎತ್ತರದ ಶಿಖರ ಮೌಂಟ್ ಎವರೆಸ್ಟ್, ಈಗ ನೇಪಾಳ ಸರಕಾರದ ಪಾಲಿಗೆ ಎಟಿಎಂ ಆಗಿದೆ. ವರ್ಷಕ್ಕೆ ಏನಿಲ್ಲವೆಂದರೂ 700 ಕೋಟಿ ರೂ ಆದಾಯ ಗಳಿಸಿಕೊಡುತ್ತದೆ. ಇದನ್ನು ಇನ್ನಷ್ಟು ಹೆಚ್ಚು ಮಾಡಿಕೊಳ್ಳಲು ನೇಪಾಳ ಸರಕಾರ, ಎವರೆಸ್ಟ್‌ಗೆ ಏಣಿ ಹಾಕಿ ಪ್ರವಾಸಿಗರಿಗೆ ಆರೋಹಣವನ್ನು ಸುಲಭ ಮಾಡುವ ಸನ್ನಾಹದಲ್ಲಿದೆ.

ಮೌಂಟ್ ಎವರೆಸ್ಟ್‌ನ ತುತ್ತ ತುದಿಯಲ್ಲಿರುವ ಹಿಲೇರಿ ಸ್ಟೆಪ್‌ಗೆ ಏಣಿ ಅಳವಡಿಸುವ ಕುರಿತು ಚಿಂತನೆ ನಡೆಸಿದೆ. 'ಹಿಲೇರಿ ಸ್ಟೆಪ್'ನಲ್ಲಿರುವ ಇಕ್ಕಟ್ಟಾದ ಮಂಜಿನ ಗೋಡೆಯನ್ನು ದಾಟುವಾಗ ಪರ್ವತಾರೋಹಿಗಳು ಸಾಕಷ್ಟು ಪ್ರಯಾಸ ಪಡುತ್ತಿದ್ದಾರೆ. ಇದನ್ನು ತಪ್ಪಿಸಲು ಆಲ್ಲಿ ಹೆಚ್ಚುವರಿ ಹಗ್ಗವನ್ನು ಅಳವಡಿಸಲಾಗುವುದು ಎಂದು ಪರ್ವತಾರೋಹಣ ಸಂಘಟಕರು ಇತ್ತೀಚೆಗೆ ಪ್ರಕಟಿಸಿದ್ದರು. ಈಗ ನೇಪಾಳ ಪ್ರವಾಸೋದ್ಯಮ ಇಲಾಖೆ ಒಂದು ಹೆಜ್ಜೆ ಮುಂದೆ ಹೋಗಿ ಪರ್ವತದ ತುತ್ತ ತುದಿಯಲ್ಲಿ ಸಂಭವಿಸುವ ದಟ್ಟಣೆಯನ್ನು ತಪ್ಪಿಸಲು ಏಣಿ ಅಳವಡಿಸಲು ಯೋಚಿಸಿದೆ. »13

ಹಿಲೇರಿ ಸ್ಟೆಪ್‌ನಲ್ಲಿ ಏಣಿ ಅಳವಡಿಸುವುದರಿಂದ ನೈಜ ಸಾಹಸಕ್ಕೆ ಧಕ್ಕೆಯುಂಟಾಗುತ್ತದೆ. ಇದರಿಂದ ಯಾರುಬೇಕಾದರೂ ಮೌಂಟ್ ಎವರೆಸ್ಟ್ ಏರಬಹುದು. ಇದು ನೇಪಾಳ ಸರಕಾರ ಎವರೆಸ್ಟ್ ಹೆಸರಲ್ಲಿ ಹಣ ವಸೂಲಿ ಮಾಡಲು ಮಾಡಿದ ತಂತ್ರ

-ಕವಿತಾ ರೆಡ್ಡಿ, ಪರ್ವತಾರೋಹಿ

ಹಣಕ್ಕಾಗಿ ಮೌಂಟ್ ಎವರೆಸ್ಟ್‌ಗೂ ಏಣಿ

» ಮೊದಲ ಪುಟದಿಂದ

''ಹಿಲೇರಿ ಸ್ಟೆಪ್‌ನಲ್ಲಿ ಯಾವಾಗಲೂ ದಟ್ಟಣೆ ಸಂಭವಿಸುತ್ತದೆ. ಏಪ್ರಿಲ್ ಹಾಗೂ ಜೂನ್ ನಡುವೆ ಇಲ್ಲಿ ದಟ್ಟಣೆ ಹೆಚ್ಚಾಗಿರುತ್ತದೆ. ಪರ್ವತಾರೋಹಿಗಳ ರಕ್ಷಣೆಯನ್ನು ಗಮನದಲ್ಲಿರಿಸಿಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ,'' ಎಂದು ನೇಪಾಳ ಪ್ರವಾಸೋದ್ಯಮ ಇಲಾಖೆಯ ವಕ್ತಾರ ಮೋಹನ್ ಕೃಷ್ಣ ಸಾಪ್ಕೋಟ ಹೇಳಿದ್ದಾರೆ. ಈ ಕುರಿತು ಅಂತಿಮ ತೀರ್ಮಾನವನ್ನು ಇಲಾಖೆಯ ಅಧಿಕಾರಿಗಳು ಕೈಗೊಳ್ಳಲಿದ್ದಾರೆ. ''ಅಲ್ಲಿ ಏಣಿಗಳನ್ನು ಅಳವಡಿಸುವುದು ಅತ್ಯಂತ ಕಷ್ಟದ ಕೆಲಸ, ಆದರೆ ಭವಿಷ್ಯದಲ್ಲಿ ಈ ಕೆಲಸವನ್ನು ಮಾಡುತ್ತೇವೆ,'' ಎಂದು ಸಾಪ್ಕೋಟ್ ಹೇಳಿದ್ದಾರೆ.

1953ರಲ್ಲಿ ಎಡ್ಮಂಡ್ ಹಿಲೇರಿ ಹಾಗೂ ತೇನ್ಸಿಂಗ್ ನಾರ್ವೆ ಮೊದಲ ಬಾರಿಗೆ ಮೌಂಟ್ ಎವರೆಸ್ಟ್ ಏರಿದ್ದರು. ಅಂದಿನಿಂದ 40 ಅಡಿ ಎತ್ತರವಿರುವ ಏರು ಪ್ರದೇಶವೊಂದಕ್ಕೆ ಹಿಲೇರಿ ಸ್ಟೆಪ್ ಎಂದು ಹೆಸರಿಡಲಾಗಿತ್ತು. ಇದುವರೆಗೂ 300ಕ್ಕೂ ಹೆಚ್ಚು ಜನರು ಮೌಂಟ್ ಎವರೆಸ್ಟ್ ಏರಲು ಹೋಗಿ ಸಾವಿಗೀಡಾಗಿದ್ದಾರೆ.

ಈಗ ಅದು ಪ್ರವಾಸ ತಾಣ!: ಎಡ್ಮಂಡ್ ಹಿಲೇರಿ ಹಾಗೂ ತೇನ್ಸಿಂಗ್ ನಾರ್ವೆ ಮೌಂಟ್ ಎವರೆಸ್ಟ್ ಶಿಖರವನ್ನು ಹಣ ವ್ಯಯ ಮಾಡದೆ ಹತ್ತಿ ಸಾಧಿಸಿರಬಹುದು. ಆದರೆ ಈಗ ಮೌಂಟ್ ಎವರೆಸ್ಟ್ ಏರುವುದು ಪ್ರವಾಸ ಮಾಡಿ ಬಂದಂತೆ. ಈ ಕಾರಣಕ್ಕಾಗಿ ನೇಪಾಳ ಸರಕಾರ ಹಿಮಾಲಯ ಪರ್ವತವನ್ನೇ ಗುತ್ತಿಗೆ ಪಡೆಯಲು ಮುಂದಾಗಿದೆ. ಹಿಂದೆ ನೈಜ ಪರ್ವತಾರೋಹಿಗಳು ಬರುತ್ತಿದ್ದರು, ಆದರೆ ಈಗ ಐಟಿ, ಬಿಟಿ ಕಂಪೆನಿಯ ಉದ್ಯೋಗಿಗಳು, ಸಿಇಒಗಳು ಇಲ್ಲಿ ಜಾಲಿ ರೈಡ್ ನಡೆಸುತ್ತಿದ್ದಾರೆ.

700 ಕೋಟಿ ರೂ. ಆದಾಯ: ನೇಪಾಳ ಸರಕಾರಕ್ಕೆ ಮೌಂಟ್ ಎವರೆಸ್ಟ್ ಆದಾಯದ ಪ್ರಮುಖ ಮೂಲವಿದ್ದಂತೆ. ಇಲ್ಲಿಗೆ ಬರುವ ಪರ್ವತಾರೋಹಿಗಳಿಂದ ಶುಲ್ಕ ವಸೂಲಿ ಮಾಡಲಾಗುತ್ತದೆ. ವಿದೇಶಿ ಸಾಹಸಿಗಳಿಂದ ಮನ ಬಂದಂತೆ ಹಣ ವಸೂಲಾಗುತ್ತಿದೆ. ಎವರೆಸ್ಟ್‌ನಿಂದಾಗಿ ನೇಪಾಳಕ್ಕೆ ವರ್ಷಕ್ಕೆ ಕನಿಷ್ಠ 700 ಕೋಟಿ ರೂ. ಆದಾಯ ಬರುತ್ತಿದೆ. ಈ ಕಾರಣಕ್ಕಾಗಿಯೇ ಇಲ್ಲಿಯ ಸರಕಾರ ಎವರೆಸ್ಟ್ ಏರುವುದನ್ನು ಇನ್ನೂ ಸುಗಮಗೊಳಿಸುತ್ತಿದೆ.

ಕರ್ನಾಟಕದವರಿಗೆ 20 ಲಕ್ಷ ರೂ. ವೆಚ್ಚ

ಮೌಂಟ್ ಎವರೆಸ್ಟ್ ಏರಿ ಸಾಹಸ ಮಾಡುವ ಹಂಬಲ ನಿಮಗಿದೆಯೇ? ಹಾಗಿದ್ದರೆ ನಿಮ್ಮಲ್ಲಿ ಬರೆ ಧೈರ್ಯ ತುಂಬಿದ್ದರೆ ಸಾಲದು, ಬ್ಯಾಂಕ್ ಖಾತೆಯಲ್ಲಿ ಹಣವೂ ತುಂಬಿರಬೇಕು. ಏಕೆಂದರೆ ಕರ್ನಾಟಕದಿಂದ ಈ ಪರ್ವತಾರೋಹಣದಲ್ಲಿ ಪಾಲ್ಗೊಳ್ಳುವವರಿಗೆ ಬರೋಬ್ಬರಿ 20 ಲಕ್ಷ ರೂ. ವೆಚ್ಚವಾಗುತ್ತದೆ. ನೇಪಾಳ ಸರಕಾರ ನಿಯೋಜಿಸಿರುವ ಏಜೆಂಟರ ಮೂಲಕವೇ ವ್ಯವಹಾರ ಮಾಡಬೇಕು. ಇದು ನೇಪಾಳ ಸರಕಾರ ಜಾರಿಗೆ ತಂದಿರುವ ಹೊಸ ನಿಮಯ.

ಅಕ್ಟೋಬರ್ ತಿಂಗಳಲ್ಲಿ ಕರ್ನಾಟಕದ ಮಹಿಳಾ ಪರ್ವತಾರೋಹಿ ಕವಿತಾ ರೆಡ್ಡಿ ಮೌಂಟ್ ಎವರೆಸ್ಟ್ ಏರಲಿದ್ದಾರೆ. ನೇಪಾಳ ಸರಕಾರದ ಈ ಯೋಜನೆಯ ಬಗ್ಗೆ ವಿಜಯಕರ್ನಾಟಕದೊಂದಿಗೆ ಮಾತನಾಡಿದ ಕವಿತಾ, ಏಣಿ ಅಳವಡಿಸಿರುವ ಕ್ರಮವನ್ನು ನೇಪಾಳ ಸರಕಾರದ ದುರಾಸೆ ಎಂದು ಟೀಕಿಸಿದ್ದಾರೆ.